ಎದುಸಿರು ಬಿಡುತ್ತಾ ಸಂದೇಶ ಓಡಿ ಬಂದ. ಟೀಚರ್ ದುರುಗುಟ್ಟಿ ನೋಡಿದರು. 'ನಿನಗೆ ಇಂದು ಪರೀಕ್ಷೆ ಎಂಬುದೂ ನೆನಪಿಲ್ಲವೋ..! ಪರೀಕ್ಷೆ ಇದೆ ಎಂದು ಹೇಳಿದ್ದರೆ ಅಪ್ಪ ಒಬ್ಬರೇ ಹೋಗುತ್ತಿದ್ದರಲ್ಲವೆ' ಎಂದು ಗದರಿಸಿದರು. ಆದರೂ ಸಂದೇಶ ಒಂದೂ ಮಾತಾಡದೆ ತನ್ನ ನಂಬರ್ ಸೀಟಿಗೆ ಹೋಗಿ ಕುಳಿತ. ಪರೀಕ್ಷೆ ಮುಗಿದ ಮೇಲೆ 'ನಿಮ್ಮಪ್ಪನವರಿಗೆ ನನ್ನ ಕಾಣಲು ಹೇಳು. ದಿನವೂ ತಡ ಮಾಡಿ ಬಂದರೆ ಪರೀಕ್ಷೆಯಲ್ಲಿ ಓದಿದ್ದು ಬರೆಯಲೂ ಆಗದು' ಎಂದು ಹೇಳಿ ಟೀಚರ್ ಉತ್ತರ ಪತ್ರಿಕೆಗಳನ್ನು ಪ್ಲಾಸ್ಟಿಕ್ ಕವರ್‌ಗೆ ಹಾಕತೊಡಗಿದರು.

ಶಾಲೆಯನ್ನು ಮುಗಿಸಿ ಮನೆಗೆ ಹೋದ ಟೀಚರಿಗೆ ತನ್ನ ತಾಯಿಯನ್ನು ಕಂಡು ಗಾಬರಿಯಾಯಿತು. ಅಯ್ಯೋ ಅಮ್ಮ ಮಲಗಿದ್ದಾರೆ ನಿದ್ದೆಗೆ ಜಾರಿದ್ದಾರೆ ಎಂದು ಭಾವಿಸಿ ಆತಂಕದಲ್ಲಿಯೇ ಅಮ್ಮ ಏನಾಯಿತು...? ಎಂದು ಕೇಳಿದರು. 'ಪರೀಕ್ಷೆಗೆ ತಡವಾಗುತ್ತದೆ ಎಂದು ಗಡಿಬಿಡಿಯಲ್ಲಿ ನೀನು ಬಿ.ಪಿ. ಗುಳಿಗೆಯನ್ನು ಕೊಡದೇ ಹೋಗಿಬಿಟ್ಟಿದ್ದೆ. ನನಗೂ ಯಾಕೋ ರಾತ್ರಿಯೆಲ್ಲ ನಿದ್ದೆ ಇರಲಿಲ್ಲ. ಬಳಲಿಕೆ ಎನಿಸಿ ಒಳಗೆ ಸೆಕೆ ಇದ್ದಿದ್ದರಿಂದ ಕಟ್ಟೆ ಮೇಲೆ ಕೂಡಲು ಹೋದೆ. ತಲೆ ಸುತ್ತಿ ಬಿದ್ದುಬಿಟ್ಟೆ. ನಿಮ್ಮ ಶಾಲೆಯ ಹುಡುಗ ಸಂದೇಶ ನನ್ನನ್ನು ಒಳಗೆ ಕರೆ ತಂದು ಮಲಗಿಸಿದ. ನೀರು ಕೊಟ್ಟು, ಸೈಕಲ್ ಮೇಲೆ ಹೋಗಿ ಡಾಕ್ಟರ್ ಕರೆತಂದ. ಅವರು ಬಿ.ಪಿ. ಹೆಚ್ಚಾಗಿದೆ ಅದಕ್ಕೆ ಹೀಗಾಗಿದೆ ಎಂದು ಗುಳಿಗೆ ಕೊಟ್ಟಿದ್ದಾರೆ. ತನ್ನ ಪರೀಕ್ಷೆಗೆ ತಡವಾಗುವುದೆಂಬುದನ್ನೂ ಬಿಟ್ಟು ನನ್ನ ಕಾಳಜಿ ಮಾಡಿದ ಸಂದೇಶನಿಗೆ ಒಳ್ಳೇ ಬುದ್ಧಿ ಇದೆ' ಎಂದು ಹೊಗಳಿದರು.

ಅಷ್ಟೊತ್ತಿಗೆ ಮನೆಯ ಬಾಗಿಲಲ್ಲಿ ಸಂದೇಶನ ಅಪ್ಪ ನಿಂತಿದ್ದರು. ಸಂದೇಶ ಇವತ್ತು ಪರೀಕ್ಷೆಗೆ ತಡಮಾಡಿ ಬಂದ. ನಾಳೆಯಿಂದ ಅವನನ್ನು ಹೊಲಕ್ಕೆ ಕರೆದುಕೊಂಡು ಹೋಗಬೇಡಿ ಎಂದು ಹೇಳಬೇಕೆಂದವರ ಮಾತು ಗಂಟಲಲ್ಲಿಯೇ ಉಳಿಯಿತು.

ಸಂದೇಶನ ತಂದೆ 'ಮೇಡಂ ಪರೀಕ್ಷೆಯಿದೆ ಎಂದು ಅವನನ್ನು ಹೊಲಕ್ಕೆ ಕರೆದುಕೊಂಡು ಹೋಗುತ್ತಿಲ್ಲ. ನೀವೇನೋ ಬರಲು ಹೇಳಿದ್ದೀರಂತೆ' ಎಂದರು. ಒಳಗೆ ಕರೆದು ಕೂಡಿಸಿದ ಟೀಚರ್–ನಿಮ್ಮ ಸಂದೇಶ ಮನೆಯಲ್ಲಿ ಪರೀಕ್ಷಾ ಸಿದ್ಧತೆ ಚೆನ್ನಾಗಿ ನಡೆಸಿದ್ದಾನೆಯೇ ಹೇಗೆ? ಅವನಿಗೆ ಏನಾದರೂ ತಿಳಿಯದಿದ್ದರೆ ನಮ್ಮನೆಗೆ ಕಳಿಸಿ ಹೇಳಿಕೊಡುವೆ ಎಂದು ಹೇಳಲು ಕರೆದಿದ್ದೆ, ಎನ್ನುತ್ತಾ ಒಳಗೆ ಹೋಗಿ ಬೆಲ್ಲ ಬೆರೆಸಿದ ಲಿಂಬು ಪಾನಕವನ್ನು ಕೊಟ್ಟರು. ಸಂದೇಶ ನಾಳೆ ಸಮಾಜಕ್ಕೆ ಸಂದೇಶ ತರುವ ವ್ಯಕ್ತಿಯಾಗುತ್ತಾನೆ. ಗುಣವಂತ ಎಂದು ತಮ್ಮ ತಾಯಿಗೆ ಮಾಡಿದ್ದ ಉಪಕಾರವನ್ನು ಸ್ಮರಿಸಿದರು.



# ಅಯ್ಯೋ ಬೇಸಿಗೆ ಬೇಡಪ್ಪ!

■ **ಕರವೀರಪ್ರಭು ಕ್ಯಾಲಕೊಂಡ**

ಕಲೆ: ಸಂತೋಷ್ ಸಸಿಹಿತ್ಲು

ಧಗಧಗ ಧಗಧಗ
ಉರಿ ಉರಿ ಬಿಸಿಲು
ಅಯ್ಯೋ ಬೇಸಿಗೆ ಬೇಡಪ್ಪ!
ದಳದಳ ದಳದಳ
ಬೆವರು ಬಸಿಯಲು
ಅಯ್ಯೋ ವಾಸನೆ ಸಾಕಪ್ಪ!

ಜುಳುಜುಳು ಜುಳುಜುಳು
ಹರಿಯುವ ಹಳ್ಳ
ಕೊಳ್ಳ ಬತ್ತಲು ಹ್ಯಾಗಪ್ಪ!
ನೀರಿನಕೊರತೆ
ಎಲ್ಲಡೆ ಆಗಲು
ನಾಡೇ ನಲುಗಿದೆ ನೋಡಪ್ಪ!

ರಪರಪ ರಪರಪ
ಮಳೆಯನು ಸುರಿಸಿ
ಮನಸಿಗೆ ನೆಮ್ಮದಿ ನೀಡಪ್ಪ!
ಹಸುರಿನ ಹಾಸಿಗೆ
ಎಲ್ಲೆಡೆ ಹಾಸಿ
ಹೊಸತನ ತೋರೊ ನನ್ನಪ್ಪ!

ಸುರುಸುರು ಸುರುಸುರು
ಸಂಕಟ ಸುರಿಯಲು
ನೆಮ್ಮದಿ ಮನಕೆ ಇಲ್ಲಪ್ಪ!
ಬಡಬಡ ಬಡಬಡ
ಕೆಲಸ ಮಾಡಲು
ಸುಸ್ತು ಬರುವುದು ಯಾಕಪ್ಪ?

ರಣಗುಡು ಬಿಸಿಲು
ಭಣಗುಡು ಭೂಮಿ
ಕರುಣೆಯನ್ನು ತೋರಪ್ಪ!
ಏನಿದು ಬೇಸಿಗೆ
ಬೇಸರ ಮನಸಿಗೆ
ಸಾಕು ಮಾಡೋ ನನ್ನಪ್ಪ! ■





## ಕುಂಚ ಪ್ರಪಂಚ



**ಪ್ರೇರಣಾ ಪಿ.**
6ನೇ ತರಗತಿ, ಇಂಡಿಯನ್ ಇಂಟರ್‌ನ್ಯಾಷನಲ್ ಸ್ಕೂಲ್, ಚಿತ್ರದುರ್ಗ